ಆಗಿನ್ನೂ ನಾನು ಬಹಳ ಸಣ್ಣವಳು. ನರ್ಸರಿ ಇದ್ದಿರಬಹುದು. ಅಜ್ಜ ತನ್ನ ಕೊನೆಯ ದಿನಗಳಲ್ಲಿ ಇದ್ದ ಅನ್ನಿಸುತ್ತೆ. ಸಾಯುವ ತನಕವೂ ಅವರಿವರನ್ನು ಲೇವಡಿ ಮಾಡುತ್ತಾ, ಸಿಟ್ಟು ಬಂದರೆ 'ಮನಿ ಬಿಟ್ಟು ಹೋಕ್ಕನಿ' ಅಂತ ಸಿಟ್ಟ್ ಮಾಡಿಕ್ಯಂಡು ಹೆದರಿಸಿಗ್ಯಂತ ನಮಜ್ಜ ಒಂದ ನಮೂನಿ ಹವಾ ಮೇಂಟೇನ್ ಮಾಡತಿದ್ದ.

ಆಗಾಗ, ''ಬೆನಕ ಬೆನಕ ಕನಕ ರೂಪ. ಪಚ್ಚೆಗಲ್ಲು ಪಾಣಿ ಪೀಠ...'' ಅಂತಲೋ, "ಕಲ್ಲ ನಾಗರ ಕಂಡರೆ ಹಾಲೆರೆವರು... ದಿಟದ ನಾಗರ ಕಂಡರೆ ಕೊಲ್ಲೆಂಬರು..." ಅಂತ ಹೇಳಿಕೊಡುತ್ತಾ ಇದ್ದಕ್ಕಿದ್ದ ಹಾಗೆ ಯಾರಾದರೂ ಸ್ನೇಹಿತರು ಸಿಕ್ಕರೆ ಇನ್ಯಾವುದೋ ಲಹರಿಗೆ ಹೋಗಿ ಮತ್ಯಾರದೋ ವಿಷಯ ತೆಗೆದು ನಗಲು ಶುರು ಮಾಡಿಬಿಡುತ್ತಿದ್ದ. ಅವನು ಹೇಳುತ್ತಿದ್ದ ಕೆಲವು ಕತೆಗಳು ನನಗೆ ಯಾವುದೋ ಕಾರಣಕ್ಕೆ ಹರಳು ನೆಟ್ಟ ಹಾಗೆ ನೆನಪಿವೆ.

ಅವ ತೀರಿ ಹೋದ ಮೇಲೆ ಕಾಲಾಂತರದಲ್ಲಿ ಅವನ ನಡವಳಿಕೆಗೂ, ಅಪ್ಪನ ನಡವಳಿಕೆಗೂ, ನನ್ನ ಭಾಗಶಃ ವ್ಯಕ್ತಿತ್ವಕ್ಕೂ ಸಾಮ್ಯ ಇದೆ ಎನ್ನುವ ಮಾತು ಕೇಳಿದಾಗಲೆಲ್ಲಾ ಅವನ ನೆನಪು ಮತ್ತಷ್ಟು ಅಪ್ಯಾಯಮಾನವಾಗಿ ಒದಗುತ್ತಿತ್ತು.

ಅವನ ಮಾತು, ನಗು, ಎತ್ತರದ ನಿಲುವು, ಮೊನಚು ವ್ಯಂಗ್ಯ, ಲೋಕಾರೂಢಿಯ ಮಾತುಗಳು ಅಲ್ಲಲ್ಲಿ ನೆನಪಾಗುತ್ತಿದ್ದವು. ಅದರ ಮಧ್ಯೆ ಮಧ್ಯೆ ಕಲ್ಪನೆಯ ಒಂದಷ್ಟು ಕುಸುರಿ ಕೆಲಸ ನಡೆದು ಕತೆ ಅಜ್ಜ ಹೇಳಿದ್ದೆಷ್ಟು, ಅವನು ಹೇಳಿರಬಹುದು ಅಂತ ನಾನೇ ಅಂದುಕೊಂಡು ಜೋಡಿಸಿಕೊಂಡಿದ್ದೆಷ್ಟು, ಅದರಲ್ಲಿ ಅವನ ಮಾತುಗಳು ಎಷ್ಟು, ಅವನ ಬಗೆಗಿನ ನನ್ನ ಕಲ್ಪನೆ ಎಷ್ಟು ಅಂತೆಲ್ಲಾ ಗಂಟು ಬಿಡಿಸಲು ಹೋಗಿ ದಿಗ್ಮೂಢಳಾಗಿ ಕೂತ ಮೇಲೆ ಇನ್ನು ಮುಂದೆ ಈ ರೀತಿಯ ಪ್ರಯತ್ನಗಳನ್ನು ಮಾಡಲೇಬಾರದು ಅಂತ ನನಗೆ ನಾನೇ ಹೇಳಿಕೊಂಡಿದ್ದೆ.

"ನಮ್ಮೂರಾಗ್ ವಬ್ಬನು ಇದ್ದ ಕುಂಟ್ ಬರಮಣ್ಣ ಅಂತ. ಎದ್ದು ಒಡಾಡಕೂ ಮೈಯ್ಯಾಗ ಕಸುವು ಇದ್ದುಲ್ಲ... ತೂಕ ಮಾಡಿರೆ ಅವುನ್ ಮೈಯ್ಯಾಗ ಒಂದ ಹತ್ತ ಕೇಜಿ ಮಾಂಸ ಇತ್ತೋ ಇಲ್ಲಪ... ಯಾವಗ ಕಂಡ್ರೂ ಕ್ವತ ಕ್ವತ ಕುದಿತುದ್ದ... ಬರೇ ಪುಕ್ಸೇಟಿ ಸಿಟ್ಟ್ ಮಾಡಿಕ್ಯಂಡಿರತಿದ್ದ... ಸಿಟ್ಟು ಅಂದರ ಹ್ಯಂಗ ಒಂದ್ ಸಾರಿ ಮಾಡಿಕ್ಯಂಡು ಬಿಡಾ ಸಿಟ್ಟಲ್ಲ... ಯಾರರೆ ಮಾತಾಡಿಸಿದ್ರ ಮಾತ್ ಮಾತಿಗೂ ಸಿಟ್ಟ ಮಾಡಿಕ್ಯಣನು... ಈ ಅಡ್ನಾಡಿ ಹಿಂಗ ಸಿಟ್ಟ ಮಾಡ್ಕ್ಯಂತನ ಹೋಗಲಿ ಇವುನವ್ನನ ಸಾವಾಸ ಬ್ಯಾಡ ಅಂತ ಅವುರ್ ಪಾಡಿಗೆ ಅವ್ರು ನಡಕಂತ ಹೋದರ ಅದುಕ್ಕೂ ಸಿಟ್ ಮಾಡಿಕ್ಯಣದೇಯ! ಯಾಕ್ರಲೇ ಕಣ್ಣಾಗೇನು ಬಟ್ಟ ಇಟಗಂಡೀರಾ? ನಾ ಇಲ್ಲಿ ಕುಂತುರದು ಕಾಣಂಗಿಲ್ಲೇನು? ಮಾತಾಡ್ಲಾಕ ಬಾಯಾಗೇನು ಶೆಗಣಿ ಹೆಟ್ಟಿಗ್ಯಂಡೀರಾ? ಅಂತ ಮ್ಯಾಲ ಬೀಳತಿದ್ದ... ಹಳೇ ಮಂಗ...

ಯಾರರೆ ಚಾಷ್ಟಿ ಮಾಡಿರಪಾ ಅಂದ್ರ ಎದ್ ಬಂದೆನಂದ್ರ ನೋಡ್ ಮತ್ತ ಏನರೆ ಮಾಡಿಬಿಡ್ತನಿ... ಅಂತ ಕೋಲ ಗಿರಗಿರ ಅನ್ನಿಸಿಗ್ಯಂತ ಹೆದುರ್ಸನು ಹುಚ್ಚ ಸುಳೇಮಗ..." ಅಂತ ಹೇಳುತ್ತಿದ್ದರೆ ಆ ಬೊಚ್ಚು ಬಾಯಿಯಲ್ಲಿ ಕೂತಿದ್ದ ಶ್ವೇತ ವರ್ಣದ ಹಲ್ಲುಗಳ ಸೆಟ್ಟು ಆಗಾಗ ವಸಡು ಬಿಟ್ಟು ಏಳುತ್ತಾ ಮತ್ತೆ ಸ್ವಸ್ಥಾನಕ್ಕೆ ಮರಳುತ್ತಾ ನಾಲಿಗೆಯು ಅಲ್ಲೇ ಹೊರಳುತ್ತಾ ಪದಗಳನ್ನು ಹೊರಕ್ಕೆ ಕಳಿಸುವ ಸೋಜಿಗವನ್ನೇ ನೋಡುತ್ತಿದ್ದೆ. ಈಗ ಅಜ್ಜನನ್ನು ನೆನೆಸಿಕೊಂಡರೆ ಇಷ್ಟೆಲ್ಲಾ ವಿವರಗಳು ನೆನಪಾಗ್ತವೆ ಅನ್ನುವುದೂ ಒಂದು ಮಹಾನ್ ಸೋಜಿಗವೇ!

ಆ ಎಳೇ ತಲೆಯಲ್ಲೂ ಒಂದು ಪ್ರಶ್ನೆ ಮೂಡುತ್ತಿತ್ತು. "ಕುಂಟ ಹ್ಯಂಗಜ ಎದ್ದ್ ಬರಾಕ ಆಕ್ಕಿತ್ತು?" ಅಂತ ಕೇಳಿದರೆ ಅಜ್ಜ ನಕ್ಕುಬಿಟ್ಟಿದ್ದ.

"ಅವ್ನು ಎದ್ದು ಬರಾ ಮಾತು ದೂರ... ಕೋಲ ಗಿರ ಗಿರ ತಿರುಗ್ಸೀ ತಿರುಗ್ಸೀ ಅವ್ನ ಬುಜ ರಟ್ಟೆ ಎಲ್ಲಾ ನೋವಾಗವು. ಅಂದ್ರೂ ಸುಮ್ಮಕಾಗಾ ಮಗ ಅಲ್ಲೇ ಅಲ್ಲ ಅವ್ನು! ಮುಕಳ್ಯಾಗ ಬೇರು ಬಿಡಾ ಮಟಾ